ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 288ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 353(2)ನೇ ನಿಯಮದ ಅನುಸಾರವಾಗಿ ಈ ಸಭೆ ವಸತಿ ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಬೇಕು.

ಛೇರ್ಮನ್:– ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸಲಾಯಿತು.

ಸರ್ಕಾರಿ ನಿರ್ಣಯಗಳು

ಶ್ರೀ ಹಾರನಳ್ಳಿ ರಾಮಸ್ವಾಮಿ (ಮಾನ್ಯ ಕಾನೂನು ಹಾಗೂ ಸಂಸದೀಯ ಸಚಿವರು):– ಮಾನ್ಯ ಅಧ್ಯಕ್ಷಣಿಯವರೆ

> "ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ ಸಂವಿಧಾನದ 368(2)ನೇ ಅನುಚ್ಛೇದದ (ಸಿ) ಮತ್ತು (ಇ) ಖಂಡಗಳ ವ್ಯಾಪ್ತಿಯಲ್ಲಿ ಬರುವ 1991ನೇ ಇಸವಿಯ ಸಂವಿಧಾನದ (72ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆಂದು ಸೂಚಿಸುವುದು.

ಪ್ರಸ್ತಾವವನ್ನು ಮಂಡಿಸಲಾಯಿತು.

† ಶ್ರೀ ಹಾರನಳ್ಳಿ ರಾಮಸ್ವಾಮಿ:– ಇದರ ಬಗ್ಗೆ ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ತಮಗೆಲ್ಲಾ ಗೊತ್ತಿರುವಂತೆ ಕರ್ನಾಟಕದಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಕಾನೂನು ಈ ಹಿಂದೆ ಬಂದಿದೆ. ಈಚೆಗೆ ಮಾನ್ಯ ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಅನೇಕ ಸ್ಥಳಗಳಲ್ಲಿ ಪ್ರತಿಯೊಂದು ರಾಜ್ಯಗಳಲ್ಲೂ ಇದರ ಬಗ್ಗೆ ಕಮ್ಮಟಗಳನ್ನು ಮಾಡಿ, ಚರ್ಚೆ ಮಾಡಿ, ಸಮಿತಿಗಳನ್ನು ಮಾಡಿ ಚರ್ಚಿಸಿ ಕೊನೆಗೆ ಕೇಂದ್ರ ಸರ್ಕಾರ ಉಭಯ ಸದನಗಳ ಮುಂದೆ ಸಂವಿಧಾನ ತಿದ್ದುಪಡಿಯನ್ನು ತಂದು ಅನಂತರ ಅದು ಜಂಟಿ ಸಮಿತಿಗೆ ಹೋಗಿ ಅಲ್ಲಿ ಸರ್ವಾನುಮತದಿಂದ ಒಪ್ಪಿಗೆಯನ್ನು ಪಡೆದು ಅದು ಉಭಯ ಸದನಗಳ ಮುಂದೆ ಬಂದು ಸರ್ವಾನುಮತದಿಂದ ಅಂಗೀಕಾರವಾಗಿ ಇಲ್ಲಿಗೆ ಬಂದಿದೆ. ಇದು ಸಂವಿಧಾನದ ತಿದ್ದುಪಡಿ. ಇದರ ಮೂಲ ಉದ್ದೇಶ, ಹಕ್ಕು ಮತ್ತು ಕರ್ತವ್ಯಗಳನ್ನು ವಿಕೇಂದ್ರೀಕರಣ ಮಾಡಿ ಗ್ರಾಮಮಟ್ಟದಲ್ಲಿರುವ ಸಂಸ್ಥೆಗಳಿಗೆ ಶಕ್ತಿಯನ್ನು ಅವಕಾಶವನ್ನು ಕೊಡುವಂಥಾದ್ದಾಗಿದೆ. ಬಹಳ ಮುಖ್ಯವಾಗಿ 3 ಅಂಶಗಳು ಇವೆ. ನಮ್ಮ ಕರ್ನಾಟಕದಲ್ಲಿರತಕ್ಕ ಶಾಸನಕ್ಕೂ, ಇದಕ್ಕೂ ಏನು ಸಂಬಂಧವಿದೆ ಎಂದರೆ, ಇದು ಸಂವಿಧಾನಾತ್ಮಕವಾದ ಒಂದು ಸಂಸ್ಥೆಯಾಗಿದೆ. ದೆಹಲಿಯಲ್ಲಿರುವ ರೀತಿಯಲ್ಲಿ ಲೋಕಸಭೆ, ರಾಜ್ಯಸಭೆ ರೀತಿಯಲ್ಲಿ ರಾಜ್ಯ ಶಾಸನಸಭೆಗಳ ರೀತಿಯಲ್ಲಿ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮಮಟ್ಟದಲ್ಲಿ ಇದು ಸಂವಿಧಾನಾತ್ಮಕ ಸಂಸ್ಥೆಯಾಗಿದೆ.

ಎರಡನೆಯದಾಗಿ, ಚುನಾವಣಾ ಕಮಿಷನನ್ನು ಮಾಡಿ ಕಾಲಕಾಲಕ್ಕೆ ಚುನಾವಣೆಯನ್ನು ಮಾಡಬೇಕೆಂದು ನಿರ್ಧಾರವಾಗಿದೆ. ಮೂರನೆಯದಾಗಿ, ಪ್ರತ್ಯೇಕ ವಿಷಯಗಳನ್ನು ಅಂದರೆ 11ನೇ ಪರಿಶಿಷ್ಟವನ್ನು ಮಾಡಿ ಅವರಿಗೆ ಅಧಿಕಾರ ಕೊಡಲಾಗಿದೆ. ಹೆಣ್ಣು ಮಕ್ಕಳಿಗೆ ಇದರಲ್ಲಿ ಮೀಸಲಾತಿ, ನಿಮ್ಮ ವರ್ಗದವರಿಗೆ ಮೀಸಲಾತಿ, ಕೇವಲ ಸದಸ್ಯತ್ವದಲ್ಲಿ ಮಾತ್ರವಲ್ಲ, ಅಧ್ಯಕ್ಷ ಸ್ಥಾನದಲ್ಲೂ ಕೂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳಿಗೆ ಕೊಡಬೇಕೆಂದು ಇದರಲ್ಲಿ ಇದೆ. ಇದು

ಇಡೀ ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲೂ ಒಪ್ಪಿಗೆಯಾಗಿರುವಂಥಾದ್ದು. ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಮೊದಲೇ ಇದ್ದಂಥ ಸರ್ಕಾರಗಳು ಇದನ್ನು ಪ್ರಾಯೋಗಿಕವಾಗಿ ಮಾಡಿವೆ.

ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇದ್ದಾಗ ಇದಕ್ಕೆ ಒಂದು ಚಾಲನೆಯನ್ನು ಕೊಟ್ಟಿದ್ದಾರೆ. ಮಾನ್ಯ ರಾಜೀವ್ ಗಾಂಧಿಯವರೂ ಸಹ ಒಂದು ಸಂವಿಧಾನಾತ್ಮಕವಾದಂಥ ಸ್ವರೂಪವನ್ನು ಕೊಟ್ಟು ಮಾಡಿದ್ದಾರೆ. ಇದರ ಆಧಾರದ ಮೇಲೆ ಕರ್ನಾಟಕದಲ್ಲಿ ಪಂಚಾಯತ್ ರಾಜ್ಯ ಸಂಸ್ಥೆಗಳ ಬಗ್ಗೆ ವಿಧೇಯಕಗಳು ಬರುತ್ತವೆ, ಅದರ ಬಗ್ಗೆ ಬೇಕಾಗಷ್ಟು ಸಮಯದಲ್ಲಿ ಚರ್ಚೆ ಮಾಡಬಹುದು, ಇದರ ಬಗ್ಗೆ, ಕೇಂದ್ರಕ್ಕೆ ತಕ್ಷಣ ನಮ್ಮ ರಾಜ್ಯ ಶಾಸನ ಸಭೆಯ ಒಪ್ಪಿಗೆಯನ್ನು ಕಳುಹಿಸಿಕೊಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಸಭೆಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಟ್ಟು ಇದನ್ನು ಶಾಸನವಾಗುವ ರೀತಿಯಲ್ಲಿ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್:– ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಚರ್ಚೆಗೆ ಮುಂಚಿತವಾಗಿ ಒಂದು ಹೇಳಿಕೆಯನ್ನು ಕೊಡತಕ್ಕಂಥ ಒಂದು ಸಂಪ್ರದಾಯ ಇದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ ಇದೇ ರೀತಿಯಲ್ಲಿ ನಗರಪಾಲಿಕೆಗೆ ಸಂಬಂಧಪಟ್ಟಂಥ 73ನೆಯ ತಿದ್ದುಪಡಿಯನ್ನು ಸಭೆಯ ಮುಂದಿಡುತ್ತೇನೆ.

(2) "ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ ಸಂವಿಧಾನದ 368 (2)ನೆ ಅನುಚ್ಛೇದದ (ಸಿ) ಮತ್ತು (ಇ) ಖಂಡಗಳ ವ್ಯಾಪ್ತಿಯಲ್ಲಿ ಬರುವ 199ನೇ ಇಸವಿಯ ಸಂವಿಧಾನದ (73ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆಂದು ಸೂಚಿಸುವುದು.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಇದರಲ್ಲೂ ಕೂಡ ಪಂಚಾಯತ್ ರಾಜ್ಯ ಸಂಸ್ಥೆಗಳನ್ನು ಸಂವಿಧಾನಾತ್ಮಕವಾದ ಒಂದು ಸಂಸ್ಥೆಗಳನ್ನಾಗಿ ಯಾವ ರೀತಿ ಮಾಡಿದೆಯೋ ಅದೇ ರೀತಿಯಾಗಿ ಕಾಲಕಾಲಕ್ಕೆ ಚುನಾವಣೆಯಾಗಿ ಚುನಾವಣೆಯ ಕಮೀಷನರ್ ಮೂಲಕ ಚುನಾವಣೆಗಳು ಹಿಡಿತಕ್ಕೆ ಬಂದು, ಪ್ರತ್ಯೇಕ ಹಣಕಾಸು ಫೈನಾನ್ಸ್ ಕಮೀಷನರ್ ಮುಖಾಂತರ ಇದಕ್ಕೆ ದೊರೆಯುವಂತೆ ಮಾಡಿ, ಈ ಆಧಾರದ ಮೇಲೆ, ನಾವು ಪ್ರತಿಯೊಂದು ರಾಜ್ಯವೂ ಪ್ರತ್ಯೇಕವಾದ ವಿಧೇಯಕಗಳನ್ನು ತಂದು ತಮ್ಮೆಲ್ಲರ ಒಪ್ಪಿಗೆಯಿಂದ ಮುಂದುವರಿಸಬೇಕಾಗುತ್ತದೆ. ಆದ್ದರಿಂದ ಇವರೆಡಕ್ಕೂ ಅನುಮತಿ ಕೊಡಬೇಕೆಂದು ಕೋರುತ್ತೇನೆ.

ಛೇರ್ಮನ್:– ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

ವಿದ್ಯುತ್ ಪೊಲೀಜ್ ಕಡತಕ್ಕೆ ಹೇಳಿಕೆ ನೀಡುವಂತೆ ಒತ್ತಾಯ.

† ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷನೇ ಅವರು ಮಾತನಾಡುವುದಕ್ಕೆ ಮುಂಚೆ ಮೊನ್ನೆ ಸಭೆಯನ್ನು ಕರೆದಿದ್ದರು ಉಪಮುಖ್ಯಮಂತ್ರಿಗಳು. ಸಭೆಯಲ್ಲಿ ಸುದೀರ್ಘವಾದ ಚರ್ಚೆಯನ್ನು ಕೂಡ ಮಾಡಿದ್ದಾರೆ. ಇದಾದ ನಂತರ ಪ್ರತಿ ದಿನ ಒಂದು ರೀತಿ ನಾನು ಅವರ ಮೇಲೆ ಆರೋಪಣೆ ಮಾಡುತ್ತಿಲ್ಲ ಇವತ್ತೂ ಸಹ ತಮಗೆ ಗೊತ್ತಿರಬಹುದು ವಿದ್ಯುಚ್ಛಕ್ತಿ ಬೆಂಗಳೂರಲ್ಲಿ ಬಹುಭಾಗ ಹೊರಟು ಹೋಗಿದೆ, ಇದು ಕರ್ನಾಟಕದಲ್ಲಿ ಅನೇಕ ಕಡೆ ನಡೆಯುತ್ತಿದೆ. ಬೆಳೆ ನಷ್ಟವಾಗುತ್ತಿದೆ, ಮಾನ್ಯ ಉಪಮುಖ್ಯಮಂತ್ರಿಗಳು ಶ್ರಮ ವಹಿಸುತ್ತಿದ್ದಾರೆ, ಅವರ ಬಗ್ಗೆ ಕಾರ್ಯವಾಗಿಲ್ಲವೆಂದು ನಾನು ಹೇಳುತ್ತಿಲ್ಲ. ಇದನ್ನು